**ಸಾಕ್ಷಿಯನ್ನು ದಿ:24.08.2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲು:- ಎದುರುದಾರರ ಪರ ಶ್ರೀ ಕೆ ಎಸ್ ಆರ್ ವಕೀಲರಿಂದ:-**

ಹಾಲಿ ಅರ್ಜಿಯಲ್ಲಿರುವ ಅಂಶಗಳು ಗೊತ್ತಿರುತ್ತದೆ. ಎದುರುದಾರನು ಏನು ತಕರಾರು ಹಾಕಿರುತ್ತಾನೆಂದು ಗೊತ್ತಿಲ್ಲ. ನಾನು ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಸುಮಾರು 50 ವರ್ಷಗಳಿಂದ ವಾಸವಾಗಿರುತ್ತೇನೆ. ನನ್ನ ಗಂಡ ಫ್ರಾನ್ಸಿಸ್ ಎಂದು ಹೇಳಲು ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿರುತ್ತೇನೆ. ನನಗೆ 4 ಜನ ಮಕ್ಕಳು. ಅದರಲ್ಲಿ ನವೀನ್ ಪ್ರಕಾಶ್, ನೀದಿ ಪ್ರಕಾಶ್, ಶೋಭ, ಸೋನಿಯ ಇರುತ್ತಾರೆ. ದಾವಸ್ವತ್ತಿನ ಖಾತೆ ಸಂಖ್ಯೆ, ವಿಸ್ತೀರ್ಣ ಮತ್ತು ಚೆಕ್ಕುಬಂದಿ ಗೊತ್ತಿಲ್ಲ.

2. ಎದುರುದಾರನು ಸುಮಾರು 20 ವರ್ಷಗಳ ಹಿಂದೆ ದಾವಸ್ವತ್ತಿನಲ್ಲಿ ಖಾಲಿ ಇರುವಾಗ ಮನೆಯನ್ನು ಕಟ್ಟಿರುತ್ತಾನೆ. ಸಾಮಾನ್ಯವಾಗಿ ಮನೆ ಕಟ್ಟಲು ಲೈಸನ್ಸ ಮತ್ತು ಖಾತೆ ಬೇಕು ಎಂದರೆ ಸರಿ. ಎದುರುದಾರನು ಯಾರ ಬಳಿ ಬಾಡಿಗೆದಾರನಾಗಿರುತ್ತಾನೆಂದು ಗೊತ್ತಿಲ್ಲ. ದಾವಸ್ವತ್ತು ಮತ್ತು ಎದುರುದಾರನು ಮನೆ ಕಟ್ಟಿರುವ ಎರಡೂ ಬೇರೆ ಬೇರೆ ಎಂದರೆ ಗೊತ್ತಿಲ್ಲ. ಎದುರುದಾರನು ಮನೆ ಕಟ್ಟಿರುವ ನಿವೇಶನ ಆತನ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ಎದುರುದಾರನು ಮುನಿಸ್ಸಿಪಾಲಿಟಿಯಲ್ಲಿ ಖಾತೆ, ಕಂದಾಯ ಮತ್ತು ಲೈಸನ್ಸ ಪಡೆದುಕೊಂಡು ಮನೆ ಕಟ್ಟಿರುತ್ತಾನೆಂದರೆ ಸಾಕ್ಷಿಯು ಸುಳ್ಳು ಎನ್ನುತ್ತಾರೆ.

3. ನನ್ನ ಗಂಡ ಫ್ರಾನ್ಸಿಸ್ 2020 ರಲ್ಲಿ ದಾವ ಆಸ್ತಿಯನ್ನು ದಾನಪತ್ರ ಮಾಡಿ ಕೊಟ್ಟಿರುತ್ತಾರೆ. ದಾನಪತ್ರದಲ್ಲಿ ದಾವಸ್ವತ್ತಿನಲ್ಲಿ ವಾಸುದೇವನ್ ಮನೆ ಕಟ್ಟಿರುವ ಬಗ್ಗೆ ಬರೆದಿರುವುದಿಲ್ಲ. ಮುನಿಸಿಪಾಲಿಟಿಯಲ್ಲಿ ನನ್ನ ಹೆಸರಿಗೆ ದಾವಸ್ವತ್ತಿನ ಖಾತೆ ಮತ್ತು ಕಂದಾಯ ಇರುವುದಿಲ್ಲ. ನನ್ನ ಮತ್ತು ಎದುರುದಾರನ ಮಧ್ಯೆ ದಾವಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಬಾಡಿಗೆ ಕರಾರು ಲಿಖಿತ ರೂಪದಲ್ಲಿ ಇರುವುದಿಲ್ಲ. ನಾನು ಎದುರುದಾರನಿಗೆ ದಾವಸ್ವತ್ತನ್ನು ಖಾಲಿ ಮಾಡುವಂತೆ ನೋಟೀಸ್ ಕೊಟ್ಟಿರುತ್ತೇನೆ. ನಾನು ಎದುರುದಾರನಿಗೆ ಯಾವುದೇ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ದಾವಸ್ವತ್ತಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಸ್ವತ್ತಿನ ಮಾಲೀಕಳೆಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಹಾಲಿ ಅರ್ಜಿಯನ್ನು ಹಾಕಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ರಿಂದ 13 ರ ದಾಖಲೆಗಳನ್ನು ಹಾಲಿ ಅರ್ಜಿಗೆ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಅಪರ ಜೆ.ಎಂ.ಎಫ್.ಸಿ, ಕೆಜಿಎಫ್**